ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಗುಡೇಕೋಟೆ

ಸಂ/ಕಂ/ಹ.ಬ./ನಾಕಗು/23/2014-15. ದಿನಾಂಕ:18-08-2016.

| ವಾದಿಗಳು | ಪ್ರತಿವಾದಿಗಳು |
|---|---|
| ಎ.ಬಸವರಾಜ ಆಚಾರಿ ತಂದೆ ಲೇಟ್ ಅಕ್ಕಸಾಲಿ ಭೀಮಪ್ಪ<br>ಕುದರೆಡವು ಗ್ರಾಮ<br>ಕೂಡ್ಲಿಗಿ ತಾಲೂಕು | ಎ.ಶಿವಕುಮಾರ ಆಚಾರಿ ತಂದೆ ನಂದೀಶ ಆಚಾರಿ<br>ಕುದರೆಡವು ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಕುದರೆಡವು ಗ್ರಾಮದ ಸನಂ 60. ವಿಸ್ತೀರ್ಣ 10-10. ಎಕ್ರೆ ಜಮೀನನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಕುದರೆಡವು ಗ್ರಾಮದ ಸನಂ 60. ವಿಸ್ತೀರ್ಣ 10-10. ಎಕ್ರೆ ಜಮೀನನ್ನು ಎ.ಬಸವರಾಜ ಆಚಾರಿ ತಂದೆ ಲೇಟ್ ಅಕ್ಕಸಾಲಿ ಭೀಮಪ್ಪ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಕುದರೆಡವು ಇವರು ನಮೂನೆ-21 ನೋಟಿಸನ್ನು ದಿನಾಂಕ 09-01-2014. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ಗ್ರಾಮದ ಎ.ಶಿವಕುಮಾರ ಆಚಾರಿ ತಂದೆ ನಂದೀಶ ಆಚಾರಿ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 05/2013-14. ದಿನಾಂಕ 10-02-2014. ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 19-08-2014 ರಿಂದ 18-08-2016. ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರ ಪರವಾಗಿ ನ್ಯಾಯಾವಾದಿಗಳು ಮತ್ತು ತಕರಾರುದಾರರ ಪರ ನ್ಯಾಯಾವಾದಿಗಳು ಹಾಜರಾಗಿರುತ್ತಾರೆ. ಅರ್ಜಿದಾರರ ಪರ ನ್ಯಾಯಾವಾದಿಗಳು ಕುದರೆಡವು ಗ್ರಾಮದ ಸನಂ 60. ವಿಸ್ತೀರ್ಣ 10-10. ಎಕ್ರೆ ಜಮೀನು ಅರ್ಜಿದಾರರ ತಂದೆಯವರಾದ ಅಕ್ಕಸಾಲಿ ಭೀಮಪ್ಪ ತಂದೆ ವಿರುಪಣ್ಣ ಇವರ ಹೆಸರಿನಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ಇವರು ದಿನಾಂಕ 01-06-1979 ರಂದು ಹಾಗೂ ಅರ್ಜಿದಾರರ ತಾಯಿಯವರಾದ ವಿರುಪಮ್ಮ ಗಂಡ ಅಕ್ಕಸಾಲಿ ಭೀಮಪ್ಪ ಇವರು ದಿನಾಂಕ 01-06-1972 ರಂದು ನಿಧನ ಹೊಂದಿರುತ್ತಾರೆ. ಕಾರಣ ಪೋತಿವಾರಸು ಹಕ್ಕಿನ ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ಅರ್ಜಿದಾರರ ತಂದೆಯವರಾದ ಅಕ್ಕಸಾಲಿ ಭೀಮಪ್ಪ ಇವರು 1/3 ಭಾಗ ಆಸ್ತೀಯನ್ನು ಬಣಕಾರ ಸದಾಶಿವಪ್ಪನು ಸಾಲದ ವಿಚಾರವಾಗಿ ಇ.ಪಿ.ನಂಬರ್: ಅರ್ಜಿ 94/74 ರಂತೆ ಸಿವಿಲ್ ನ್ಯಾಯಾಲಯ ಮತ್ತು ಪ್ರಥಮ ದರ್ಜೆ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಸಲ್ಲಿಸಿದ್ದು ಸದರಿಯವರು ಸಾಲ ತೀರಿಸುವ ಸಂಬಂಧ

ಪು.ತಿ.ನೋ:-2.

ನೊಂದಾಯಿತ ಕ್ರಯ ಪತ್ರದಂತೆ ದಸ್ತಾವೇಜು ಸಂಖ್ಯೆ 1226/1974-75 ರಲ್ಲಿ ರೂ: 300/- ಗಳಿಗೆ ನೊಂದಣಿಯಾಗಿರುತ್ತದೆಯೇಂದು ಅವರೇ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ವಿವಾದಿತ ಜಮೀನಿನಲ್ಲಿ ಎದುರುದಾರರಿಗೆ ಯಾವುದೇ ತರವಾದ ಸಂಬಂಧವಿಲ್ಲದ ಕಾರಣ ಸದರಿ ಎದರುದಾರರು ಕೋರಿರುವಂತೆ 2/3 ಭಾಗದ ಆಸ್ತೀ ಕೊಡಲು ಈ ಘನ ನ್ಯಾಯಾಲಯಕ್ಕೆ ಅಧಿಕಾರ ವ್ಯಾಪ್ತಿ ಇಲ್ಲದ ಕಾರಣ ಅರ್ಜಿದಾರರ ಅರ್ಜಯನ್ನು ಪುರಸ್ಕರಿಸಿ ಅವರ ಹೆಸರಿಗೆ ಹಕ್ಕು ಬದಲಾವಣೆಗೆ ಆದೇಶ ಮಾಡಬೇಕೆಂದು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರ ಪರ ನ್ಯಾಯಾವಾದಿಗಳು ಹಾಜರಾಗಿದ್ದು ಸದರಿ ವಿವಾದಿತ ಜಮೀನು ಪ್ರತಿವಾದಿಯಾ ಪಿತ್ರಾರ್ಜಿತ ಆಸ್ತೀಯಾಗಿದ್ದು ಸದರಿ ಜಮೀನಿನಲ್ಲಿ 6-00 ಎಕ್ರೆ ಜಮೀನನ್ನು ಪ್ರತಿವಾದಿಗಳ ಸ್ವಾದೀನ ಅನುಭವದಲ್ಲಿ ಇರುತ್ತದೆ. ಅರ್ಜಿದಾರರಾದ ಬಸವರಾಜ ಮತ್ತು ಅವರ ತಂದೆ ಅಕ್ಕಸಾಲಿ ಭೀಮಪ್ಪ ಇಬ್ಬರು ಸೇರಿ ದಿನಾಂಕ 25-09-1974 ರಲ್ಲಿ ನೊಂದಾಯಿತ ದಸ್ತಾವೇಜು ಮೂಲಕ ರೂ:300/- ಗಳಿಗೆ ಅವರ ಭಾಗದ ಜಮೀನಿನಲ್ಲಿ 1/3 ಹಿಸ್ಸಾಯನ್ನು ಪ್ರತಿವಾದಿಯ ತಾತನವರಾದ ಅಕ್ಕಸಾಲಿ ಮಲ್ಲಪ್ಪ ಇವರಿಗೆ ಮಾರಾಟ ಮಾಡಿರುತ್ತಾರೆ.

ಸದರಿ ಜಮೀನಿನಲ್ಲಿ 6-00 ಎಕ್ರೆ ಜಮೀನನ್ನು ಪ್ರತಿವಾದಿಗಳು ಸಾಗುವಳಿ ಮಾಡುತ್ತಿದ್ದು ಸದರಿ ಅರ್ಜಿದಾರರಾದ ಬಸವರಾಜ ಇವರು ಯಾವುದೇ ರೀತಿಯಾ ಹಕ್ಕು ಹೊಂದಿರುವುದಿಲ್ಲ ಕಾರಣ ಅರ್ಜಿದಾರರ ಅರ್ಜಿಯನ್ನು ರದ್ದು ಪಡಿಸಿ ಪ್ರತಿವಾದಿಯ ಹೆಸರಿಗೆ ಖಾತಾ ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಪರ ನ್ಯಾಯಾವಾದಿಗಳ ಹೇಳಿಕೆ ಮತ್ತು ತಕರಾರುದಾರರ ಪರ ನ್ಯಾಯಾವಾದಿಗಳ ಹೇಳಿಕೆಗಳನ್ನು ಕೇಳಿ ಕಂದಾಯ ಪರಿವೀಕ್ಷಕರು ಗುಡೇಕೋಟೆ ಇವರು ಈ ಪ್ರಕಣದಲ್ಲಿ ಹಕ್ಕು ಬದಲಾವಣೆ ಕೋರಿ ಅರ್ಜಿ ಸಲ್ಲಿಸಿದ ಎ.ಬಸವರಾಜ ಆಚಾರಿ ಇವರು ಮರಣ ಹೊಂದಿದ್ದಾರೆಂದು ವರದಿ ಸಲ್ಲಿಸಿರುವ ಕಾರಣ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಕುದರೆಡವು ಗ್ರಾಮದ ಸನಂ 60. ವಿಸ್ತೀರ್ಣ 10-10. ಎಕ್ರೆ ಜಮೀನಿನ ಅರ್ಜಿದಾರರು ಮರಣ ಹೊಂದಿರುವ ಕಾರಣ ಯಥಾಸ್ಥಿತಿಯಂತೆ ಮುಂದುವರೆಸಲು ಆದೇಶಿಸಿ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಯಗೊಳಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 18-08-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.



ಉಪ ತಹಶೀಲ್ದಾರರು
ನಾಡಕಛೇರಿ ಗುಡೇಕೋಟೆ.
ಗುಡೇಕೋಟೆ

ಮು.ತಿ.ನೋ:-3

ಇದರ ಪ್ರತಿಯನ್ನು:

1) ಅರ್ಜಿದಾರರಾದ ಎ.ಬಸವರಾಜ ಆಚಾರಿ ತಂದೆ ಲೇಟ್ ಅಕ್ಕಸಾಲಿ ಭೀಮಪ್ಪ ಕುದರೆಡವು ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ನ್ಯಾಯಾವಾದಿಗಳಾದ ಎಂ.ಸೂರಪ್ಪ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಎ.ಶಿವಕುಮಾರ ಆಚಾರಿ ತಂದೆ ನಂದೀಶ ಆಚಾರಿ ಕುದರೆಡವು ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಹೆಚ್.ಗುರುರಾಜ್‌ರಾವ್ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.